

ಚಿತ್ರ: ಎಚ್.ಸತೀಶ್



ಚಿತ್ರ: ಎಚ್.ಸತೀಶ್

ಧೈರ್ಯವನ್ನು ತುಂಬುತ್ತವೆ ಎಂಬ ಮುಂತಾದ ನಂಬಿಕೆಗಳನ್ನು ಇಂದಿಗೂ ಜನರು ಉಳಿಸಿಕೊಂಡಿರುವುದು ಹುಲಿಗೆ ಪ್ರಾಣಾಂತಿಕವಾಗಿವೆ.

1970ರ ಪ್ರಾರಂಭದಲ್ಲಿ ಅಂತರರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಯತ್ನಗಳು ತೀವ್ರಗೊಂಡ ಪರಿಣಾಮವಾಗಿ ಹುಲಿಯ ಅಂಗಾಂಗಗಳ ಅಂತರರಾಷ್ಟ್ರೀಯ ವ್ಯಾಪಾರದ ವಿರುದ್ಧದ ನಿಯಮಗಳು ಬಲಗೊಂಡವು. ಆದರೆ ಅದು ದೇಶೀಯ ವ್ಯಾಪಾರವನ್ನು ನಿಷೇಧಿಸಲಿಲ್ಲ. 1993ರಲ್ಲಿ ದೆಹಲಿಯಲ್ಲಿ ನಡೆದ ದಾಳಿಯೊಂದರಲ್ಲಿ 500 ಕಿ.ಗ್ರಾಂ. ಹುಲಿಯ ಮೂಳೆಗಳು ದೊರೆತಿದ್ದವು. ಭಾರತೀಯ ವನ್ಯಜೀವಿ ಸಂರಕ್ಷಣಾ ಸಮಿತಿ ಪ್ರಕಟಿಸಿರುವ ಹುಲಿಯ ಸಾವಿನ ಪ್ರಕರಣಗಳ ವರದಿಯ ಪ್ರಕಾರ, 1994 ರಲ್ಲಿ ಹುಲಿಗಳ ಸಾವಿನ ಸಂಖ್ಯೆ 95ರಷ್ಟಿದ್ದು ಅದು ಕಡಿಮೆಯಾಗುತ್ತಾ 2006ರಲ್ಲಿ 36ಕ್ಕೆ ಇಳಿಯಿತು. ಪ್ರೊಜೆಕ್ಟ್ ಟೈಗರ್, ರಾಷ್ಟ್ರೀಯ ಹುಲಿ ಸಂರಕ್ಷಣಾ ಅಥಾರಿಟಿ, ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೋ, ವಿಶ್ವ ಹುಲಿ ಸಂಘಟನೆ, ರಾಷ್ಟ್ರೀಯ ವನ್ಯಜೀವಿ ಕ್ರಿಯಾ ಯೋಜನೆ, ಟೈಗರ್ ಟಾಸ್ಕ್ ಫೋರ್ಸ್, ಕೊಯಮತ್ತೂರ್ ಚಾರ್ಟರ್, ಚೀನಾ ಹಾಗೂ ನೇಪಾಳದ ಜೊತೆ ಇರುವ ಹುಲಿ ವ್ಯಾಪಾರ ನಿಯಂತ್ರಿಸುವ ಒಪ್ಪಂದ– ಮುಂತಾದ ಕ್ರಮಗಳ ಪರಿಣಾಮವಾಗಿ ಇಂದು ಹುಲಿಗಳ ಕಳ್ಳಬೇಟೆ ನಿಯಂತ್ರಣಕ್ಕೆ ಬಂದಿದೆ. ಆದರೆ ಸಂಪೂರ್ಣವಾಗಿ ನಿಂತಿದೆ ಎಂದು ಹೇಳುವಂತಿಲ್ಲ.

## ಬಲಿ ಪ್ರಾಣಿಗಳ ಹೆಚ್ಚಳ

ಕಾಡಿನಲ್ಲಿ ಹುಲಿಗಳಿಗೆ ಆಹಾರಕ್ಕಾಗಿ ಬೇಕಾದ ಬಲಿ ಪ್ರಾಣಿಗಳಾದ ಜಿಂಕೆ, ಕಾಟಿ, ಕಡವೆಗಳಂತಹ ಪ್ರಾಣಿಗಳ ಸಂಖ್ಯೆ ಹಾಗೂ ಹುಲಿಯ ಸಂಖ್ಯೆಯ ನಡುವೆ ನೇರ ಸಂಬಂಧವಿದೆ. ಹುಲಿಯೊಂದು ವರ್ಷಕ್ಕೆ 50 ಬಲಿ ಪ್ರಾಣಿಗಳನ್ನಾದರೂ ಕೊಲ್ಲಲೇ ಬೇಕು. ಹೀಗಾಗಿ ಹುಲಿ ಸಂಕುಲವೊಂದು ಉಳಿಯಬೇಕಾದರೆ ಈ ಬಲಿ ಪ್ರಾಣಿಗಳ ಸಂಪನ್ಮೂಲವೂ ಸರಿಯಾದ ರೀತಿಯಲ್ಲಿ ಹೆಚ್ಚಳವಾಗಬೇಕು. ಹುಲಿ ಮತ್ತು ಬಲಿ ಪ್ರಾಣಿಗಳ ನಡುವಿನ ಸಮತೋಲನ ಯಾವುದೇ ರೀತಿಯ ಕೃತಕ ಹಸ್ತಕ್ಷೇಪವಿಲ್ಲದೆ ಪ್ರಕೃತಿಯಲ್ಲಿ ಮಾತ್ರ ಸಾಧ್ಯ. ಬಲಿ ಪ್ರಾಣಿಗಳಾದ ಗೊರಸು ಪ್ರಾಣಿಗಳು ವರ್ಷವೊಂದಕ್ಕೆ ಒಂದು ಅಥವಾ ಎರಡು ಮರಿಗಳಿಗೆ ಜನ್ಮ ನೀಡುತ್ತವೆ ಎಂದುಕೊಂಡರೆ ಅವುಗಳ ವಾರ್ಷಿಕ ಹೆಚ್ಚಳ ಶೇಕಡಾ 10ರಿಂದ 20.

ಇದುವರೆಗೆ ರಕ್ಷಿತ ಅರಣ್ಯ ಪ್ರದೇಶದಲ್ಲಿ ನಡೆದ ಅಧ್ಯಯನಗಳಿಂದ ತಿಳಿದು ಬಂದಿರುವ

### ಕರ್ನಾಟಕದ ಹುಲಿ ಸಂರಕ್ಷಣಾ ಪ್ರದೇಶಗಳು

ಬಂಡೀಪುರ, ನಾಗರಹೊಳೆ, ಭದ್ರಾ, ಅಣಶಿ–ದಾಂಡೇಲಿ, ಬಿ.ಆರ್.ಟಿ., ಕುದುರೇಮುಖ, ಮಧುಮಲೈ, ಬಂಡೀಪುರ, ನಾಗರಹೊಳೆ, ವೈನಾಡ್ ಒಟ್ಟಾಗಿ ಜಗತ್ತಿನ ಅತಿ ಹೆಚ್ಚು ಹುಲಿ ಸಾಂದ್ರತೆಯ ಪ್ರದೇಶ ಎನಿಸಿಕೊಂಡಿದೆ.